


## ಎಲ್ಲ ಕಾಲದಲ್ಲೂ ‘ಪೆನಾಲ್ಟಿ’

‘ಮಡಿಲ ಹೂ ಈಗ ಭಾರ?’ (ಜ. 16, ಕೋಡಿಬೆಟ್ಟು ರಾಜಲಕ್ಷ್ಮಿ) ಮುಖಪುಟ ಲೇಖನ ಚೆನ್ನಾಗಿದೆ. ತಾಯ್ತನದ ಹೊಣೆಗಾರಿಕೆಯಿಂದ ಎಷ್ಟೋ ಹೆಣ್ಣುಮಕ್ಕಳ ಆಸೆ ಆಕಾಂಕ್ಷೆಗಳು ಕಮರಿಹೋಗಿವೆ. ಅವರ ಬುದ್ಧಿಶಕ್ತಿ, ಉತ್ಸಾಹ ವ್ಯರ್ಥವಾಗಿದೆ. ಈ ಲೇಖನ ಓದಿದಾಗ ನನ್ನ ತಾಯಿ ನೆನಪಾಯಿತು.

ಅವರಲ್ಲಿದ್ದ ಜಾಣ್ಮೆ, ಕಲಿಯಬೇಕೆಂಬ ಉತ್ಸಾಹ ಎಲ್ಲವನ್ನೂ ದೊಡ್ಡ ಸಂಸಾರ, ತಾಯ್ತನದ ಹೊಣೆಗಾರಿಕೆ ಕುಂಠಿತಗೊಳಿಸಿತು. ‘ಮದರ್‌ಹುಡ್ ಪೆನಾಲ್ಟಿ’ 60 ವರ್ಷಗಳ ಹಿಂದೆಯೂ ಮತ್ತು ಈಗಲೂ ಪ್ರಸ್ತುತ.

—ವಸುಧಾ ಜೈಶಂಕರ್, ಬೆಂಗಳೂರು

## ಕುಟುಂಬದ ಕಷ್ಟಕ್ಕೆಲ್ಲ ಹೆಣ್ಣೇ ಕಾರಣ?

ಲೇಖನದಲ್ಲಿ ತಿಳಿಸಿರುವಂತೆ ತಾಯ್ತನ ಸುಂದರವಾದರೂ, ಪುರುಷ ಅಹಂಕಾರದ ಕಣ್ಣಿಗೆ ಹೆಣ್ಣು ಹೆರುವ ಯಂತ್ರ. ಮಕ್ಕಳ ಲಾಲನೆ ಪಾಲನೆ, ಮನೆಯ ಒಳಿತು ಕೆಡುಕು, ಬಂಧು ಬಾಂಧವರ ಸಂಬಂಧಗಳಿಗೆ ಅವಳೇ ಕಾರಣ ಎನ್ನುವ ಮಾತು ಬಹುಪಾಲು ಮಹಿಳೆಯರ ಅನುಭವದ ಮಾತು. ಮಕ್ಕಳು ದೊಡ್ಡವರಾಗಿ ಒಳ್ಳೆಯ ದಾರಿಯಲ್ಲಿ ಹೋದರೆ ಅಪ್ಪಂದಿರು ‘ನಾನು ಬೆಳೆಸಿದ ಮಕ್ಕಳು’ ಎಂದು ತಮ್ಮ ಬೆನ್ನು ತಟ್ಟಿಕೊಳ್ಳುತ್ತಾರೆ. ಆದರೆ, ಮಕ್ಕಳು ತಪ್ಪು ಮಾಡಿದರೆ ‘ನಿನ್ನಿಂದಲೇ ಮಕ್ಕಳು ಹಾಳಾಗಿದ್ದು’ ಎಂದು ಅಮ್ಮನ ಮೇಲೆ ಗೂಬೆ ಕೂರಿಸುತ್ತಾರೆ. ನಿಜಕ್ಕೂ ಲೇಖನ ಮನಮಿಡಿಯುವಂತಿದೆ.

—ವೀಣಾ ಶಂಕರ್, ಬೆಂಗಳೂರು

## ಪದವಿ

‘ಹೆಣ್ಣಿನ ಶೋಷಣೆ, ಅವಳ ಮೇಲಿನ ದೌರ್ಜನ್ಯ ಏನೇ ಇರಲಂತೆ, ‘ಮಾತೃ’ ಪದವಿಯನ್ನು ಅವಳಿಂದ ಕಸಿದುಕೊಳ್ಳುವುದು ಸಾಧ್ಯವಿಲ್ಲ! (ಬೆಲೆಯುಳ್ಳ ಲೇಖನ).

—ಸಿಪಿಕೆ, ಮೈಸೂರು

## ಅರ್ಥಗರ್ಭಿತ ಲೇಖನ

ತಾಯ್ತನದ ಕುರಿತ ಲೇಖನ ಅರ್ಥಗರ್ಭಿತವಾಗಿದೆ. ‘ಮೂರು ಮಕ್ಕಳನ್ನು ಮಾಡಿಕೊಳ್ಳಿ’ ಎಂದು ಈಚೆಗೆ ಭಾಷಣ ಮಾಡಿದ ಸ್ವಾಮೀಜಿಗಳು ಇದನ್ನೊಮ್ಮೆ ಓದಬೇಕು.

—ತು.ರು. ಚಂದ್ರಶೇಖರ

## ಈ ತಲೆಮಾರಿನ ಬದುಕು-ಬವಣೆ

‘ಮದರ್‌ಹುಡ್ ಪೆನಾಲ್ಟಿ’ ದಿನಗಳ ತಾಯಂದಿರ ತವಕ ತಲ್ಲಣಗಳು, ತಾಂತ್ರಿಕ ಯುಗದ ವಾಸ್ತವತೆಯೊಂದಿಗೆ ಚೆನ್ನಾಗಿ ನಿರೂಪಿತವಾಗಿವೆ. ಲೇಖನ ಓದುವಾಗ ನನ್ನನ್ನೇ ನಾನು ಸ್ವವಿಮರ್ಶೆ ಮಾಡಿಕೊಂಡೆ. ಆಧುನಿಕ ದಿನಗಳ ಅವಶ್ಯಕತೆಗೆ ಪತಿ ಪತ್ನಿಯರು ಕೆಲಸ ಮಾಡಲೇಬೇಕಾಗಿದೆ. ತಡವಾದ ಮದುವೆ, ಮಕ್ಕಳನ್ನು ಹೆರುವುದನ್ನು ಮುಂದೆ ತಳ್ಳುತ್ತಿರುವ ಕಾರಣ, ಮಕ್ಕಳನ್ನು ನೋಡಿಕೊಳ್ಳುವುದೂ ಕಷ್ಟಕರ ಆಗುತ್ತಿದೆ. ಇಂದು ನನ್ನ ಮಕ್ಕಳು ಒಳ್ಳೆಯ ಉದ್ಯೋಗದಲ್ಲಿದ್ದಾರೆ. ಅವರ ಮಕ್ಕಳನ್ನೂ ಬೆಳೆಸಿದ ಭಾಗ್ಯ ನಮ್ಮದು. ಆದರೆ ಮಕ್ಕಳ ಉದ್ಯೋಗದ ಬವಣೆಯನ್ನು ನೋಡುವುದು ಕಷ್ಟ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಸುಂದರ ಪ್ರೇಮಕಾವ್ಯ

‘ಯಾರಾದರೂ ಮುಂದುವರೆಸುವರೆಂದು’ (ಜ. 16, ಸ. ರಘುನಾಥ) ಕಥೆ ಬಲು ಸುಂದರ. ಅಬ್ಬಾ! ಅದೆಂಥ ಮಧುರ ಪ್ರೇಮ! ಇಂತಹ ಅಪರಿಮಿತ ಪ್ರೇಮ ಅನುಭವಿಸಿದವರೇ ಧನ್ಯರು. ‘ಪರಿಮಳದಲ್ಲಿ ಮನೆ ಕಟ್ಟುವೆ’ ಪ್ರೇಮಕಾವ್ಯದ ಸಾಲುಗಳು ಸೊಗಸಾಗಿವೆ.

—ವಿ. ಲೋಕೇಶ್, ಬೆಂಗಳೂರು



## ನವ್ಯಕಾವ್ಯದಂಥ ಕಥೆ

ಕಥೆ ಓದಿದ ಓದುಗನೊಬ್ಬ ‘ಈ ಕತೆಯೇ ಒಂದು ನವ್ಯ ಕವನದಂತಿದೆ’ ಎಂದ. ‘ಅಂದರೆ… ಕತೆ ಅರ್ಥವಾಯಿತೇ?’ ಕುತೂಹಲದಿಂದ ಕೇಳಿದ ಕಥೆಗಾರ. ‘ಅದನ್ನೇ ನಾನೂ ಹೇಳಿದೆ… ಗೊತ್ತಾಗಲಿಲ್ಲವೇ?’ ಮರು ಪ್ರಶ್ನಿಸಿದ ಓದುಗ.

—ಆಕರ್ಷನ್, ಮೂಡುಬಿದಿರೆ

## ಓದಿ ಆನಂದಿಸಿದೆ

ನನ್ನ ಶಾಲಾ ದಿನಗಳಲ್ಲಿ ಕನ್ನಡ ಮಾಸ್ತರುಗಳು ಇದೇ ರೀತಿ ವರ್ಣಿಸಿ ಪಾಠ ಮಾಡುತ್ತಿದ್ದರು. ಅವರೆಲ್ಲರ ನೆನಪಾಯಿತು. ಕವನದ ಓಲೆ, ಪ್ರತ್ಯುತ್ತರದ ಓಲೆಯನ್ನು ಎರಡೆರಡು ಸಲ ಓದಿ ಆನಂದಿಸಿದೆ.

—ಸಿ. ಸರಳಾಮಣಿ, ಮೈಸೂರು



## ಭವಿಷ್ಯದ ಆಶಾಕಿರಣ

‘ಕೆರೆಗೆ ಜಲ ಊರಿಗೆ ಬಲ’ (ಜ. 16, ಮಲ್ಲಿಕಾರ್ಜುನ ಹೊಸಪಾಳ್ಯ) ಉಪಯುಕ್ತ ಮಾಹಿತಿಗಳನ್ನು ಒದಗಿಸುವುದಲ್ಲದೇ, ನೀರಿನ ಸಮಸ್ಯೆಗೆ ಆಶಾಕಿರಣದಂತಿದೆ.

—ದೊ. ಜನಾರ್ದನ, ಬೆಂಗಳೂರು

## ಶ್ಲಾಘನೀಯ ಕಾರ್ಯ

‘ಮನುವಿಕಾಸ’ ಸಂಸ್ಥೆ ತುಂಬಾ ಒಳ್ಳೆಯ ಕೆಲಸ ಮಾಡುತ್ತಿದೆ. ಈ ಕುರಿತು ಮಾಹಿತಿ ನೀಡಿದ ಲೇಖಕರಿಗೆ ಧನ್ಯವಾದ.

—ಜಬಿ

## ಸುಂದರ ‘ಸಂ-ಕ್ರಾಂತಿ’

‘ಪುಣ್ಯ ಕಾಲದ ಸಂ-ಕ್ರಾಂತಿ’ (ಜ. 16, ಗೌರಿ) ಅರ್ಥಗರ್ಭಿತ ಬರಹ. ‘ಧರ್ಮಗಳೇ ದಳ್ಳುರಿ, ಆಡಳಿತ ದುರುಳರ ಕೂಟ, ವ್ಯಾಪಾರ ದುರಾಚಾರದ ಸಂತೆಯಾಗಿ’ ಎಂಬ ಸಾಲುಗಳು ತುಂಬಾ ಚೆನ್ನಾಗಿವೆ.

—ಜಗದೀಶ ಎಸ್.

## ಮೌಲಿಕ ಬರಹ

‘ಕೊಪ್ಪಳದ ಕನ್ನಡಿಯಲ್ಲಿ ಕಂಡ ಕನ್ನಡದ ದುರವಸ್ಥೆ, ಕನ್ನಡದ ಕಲಿಕೆಯಲ್ಲಿ ಕನ್ನಡದ ಮಕ್ಕಳೇ ಹಿಂದೆ’ (ಜ. 02, ರಘುನಾಥ ಚ.ಹ.) ‘ನಿಮ್ಮೊಡನೆ’ಯಲ್ಲಿ ಲೇಖಕರು ತುಂಬಾ ಮೌಲಿಕ, ಮೂಲಭೂತ ಪ್ರಶ್ನೆಯನ್ನು ಎತ್ತುವ ಮೂಲಕ, ಶಿಕ್ಷಣ ಕ್ಷೇತ್ರದಲ್ಲಿ ಇಂಥ ವಿದ್ಯಾರ್ಥಿಗಳ ಜೊತೆ ಪರದಾಡುತ್ತಿರುವ ನನ್ನಂತಹ ಹಲವರ ಮನದಾಳದ ಮಾತುಗಳನ್ನು ಸಮಾಜದ ಗಮನಕ್ಕೆ ತಂದಿದ್ದಾರೆ.

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009ರ ಪ್ರಕಾರ ನಮ್ಮ ರಾಜ್ಯದಲ್ಲಿ ಮಕ್ಕಳನ್ನು 8ನೇ ತರಗತಿಯವರೆಗೆ ನಪಾಸು ಮಾಡುವಂತಿಲ್ಲ. ಹಾಗಾಗಿ ‘ತಲೆಗಿಂತಲೂ ಕಿರೀಟ ಭಾರ’ ಎಂಬಂತೆ ಪಠ್ಯೇತರ ಕಾರ್ಯಗಳಲ್ಲಿ ವ್ಯಸ್ತರಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಕಲಿಸುವುದರಲ್ಲಿ ಹಿಂದೆ ಬಿದ್ದಿದ್ದಾರೆ. ಪ್ರಾಥಮಿಕ ಹಂತದಲ್ಲಿ ಕಲಿಯಬೇಕಾದುದನ್ನು ಕಲಿಯದೆ ಮುಂದಿನ ಹಂತಕ್ಕೆ ಬರುವ ವಿದ್ಯಾರ್ಥಿಗಳು ಪಠ್ಯದ ಒತ್ತಡದಿಂದ ಬಳಲಿ ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶಕ್ಕೆ ಮಾತ್ರ ಒತ್ತು ಕೊಡುವ ಇಲಾಖೆಯ ಕ್ರಮದಿಂದಾಗಿ ಈ ಹಂತದಲ್ಲಿ ಶಿಕ್ಷಕರು ಒದ್ದಾಡುತ್ತಾರೆ. ಈಗಲಾದರೂ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ಕೊಡುವ ಕೆಲಸ ಆಗಬೇಕಿದೆ.

—ರುಕ್ಮಿಣಿ ಮಾವಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in